**ಪ್ರಧಾನ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು**

**ಸಿಸಿ 388/2023** **ಡಿಡಬ್ಲ್ಯೂ-1**

ಸಾಕ್ಷಿದಾರರ ಹೆಸರು - ಶ್ರೀನಿವಾಸ್

ತಂದೆಯ ಹೆಸರು - ಸೋಮಶೇಖರ್

ವಯಸ್ಸು - 31 ವರ್ಷ

ಉದ್ಯೋಗ - ವ್ಯಾಪಾರ

ವಾಸಸ್ಥಳ - ಬೆಂಗಳೂರು

ದಿನಾಂಕಃ-22-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃಃ ಆರೋಪಿ ಪರ ಶ್ರೀ. ಎಂಎನ್ ಎಂ ವಕೀಲರಿಂದಃ-**

ನಾನು ಮತ್ತು ನನ್ನ ತಮ್ಮ ಸುಮಾರು 5 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸಿಸುತ್ತಿದ್ದು ನಮ್ಮ ಊರಿನಲ್ಲಿ ನನ್ನ ತಂದೆ ತಾಯಿ ಮಾತ್ರ ವಾಸಿಸುತ್ತಿದ್ದರೆ. ದೂರು ದಾಖಲಿಸಿರುವ ದೂರುದಾರರು ಯಾರು ಎಂದು ನನಗೆ ಗೊತ್ತಿಲ್ಲ. ಕ್ಯಾತಘಟ್ಟ ಎಂಬ ಗ್ರಾಮದಲ್ಲಿನನ್ನ ಸ್ನೇಹಿತನಾದ ಪ್ರಮೋದ್ ಇದ್ದಾರೆ. ಸದರಿಯವರ ಬಳಿ 2020-21 ರ ಸಮಯದಲ್ಲಿ ನಾನು 2 ಲಕ್ಷದ ಚೀಟಿ ಹಾಕಿದ್ದು, ಸದರಿ ವೇಳೆಯಲ್ಲಿ 2 ಚೆಕ್ ಮತ್ತು 1 ಆನ್ ಡಿಮ್ಯಾಂಡ್ ಪ್ರನೋಟ್ ನ್ನು ಕೊಟ್ಟಿದ್ದೆ. ಚೀಟಿ ಪಡೆದುಕೊಂಡ ನಂತರ ಸಂಪೂರ್ಣ ಹಣ ಪಾವತಿ ಮಾಡಿದ್ದೆನೆ. ಆದರೆ ಚೆಕ್ ಮತ್ತು ಪ್ರನೋಟ್ ನೀಡಿಲ್ಲ. ಸದರಿ 2 ಚೆಕ್ ಗಳಲ್ಲಿ ಪ್ರಮೋದ್ ಎಂಬುವವರ ತಂದೆ ಸಿದ್ದರಾಮು ರವರು ಸಿಸಿ ನಂ.1722/2022 ಎಂಬ ಪ್ರಕರಣ ಹೂಡಿದ್ದು, ಮತ್ತೊಂದು ಪ್ರಕರಣವನ್ನು ಈ ದೂರುದಾರರು ನೀಡಿರುತ್ತಾರೆ. ನನಗೆ ಸದರಿ 2 ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ನೋಟೀಸ್ ನನ್ನ ಊರಿಗಾಗಲಿ ಅಥವಾ ಬೆಂಗಳೂರಿಗಾಗಲಿ ಬಂದಿರಲಿಲ್ಲ ಮತ್ತು ಈ ಬಗ್ಗೆ ಪ್ರಮೋದ್ ರವರು ಕೂಡ ತಿಳಿಸಿಲ್ಲ. ನನಗೆ ಬಂಧನ ವಾರೆಂಟ್ ಜಾರಿಯಾಗಿ ನ್ಯಾಯಾಲಯಕ್ಕೆ ಬಂದ ನಂತರವೇ ಸದರಿ ವಿಚಾರ ಗೊತ್ತಾಗಿರುತ್ತದೆ. ನಂತರ ದೂರುದಾರರು ಯಾರು ಎಂದು ವಿಚಾರಿಸಿದಾಗ ಸದರಿಯವರು ಮೇಲೆ ಹೇಳಿದ ಪ್ರಮೋದ್ ರವರ ಸೋದರ ಮಾವನಾಗಿರುತ್ತಾರೆ. ಸದರಿ ದೂರುದಾರರನ್ನು ನ್ಯಾಯಾಲಯದಲ್ಲಿಯೇ ಮೊದಲ ಬಾರಿಗೆ ನೋಡಿರುತ್ತೇನೆ. ಸದರಿ ದೂರುದಾರರೊಂದಿಗೆ ಯಾವುದೇ ಹಣಕಾಸಿನ ವ್ಯವಹಾರ ಮಾಡಿಲ್ಲ. ಆದ್ದರಿಂದ ಪ್ರಕರಣಕ್ಕೂ ಮತ್ತು ನನಗೂ ಯಾವುದೇ ಸಂಬಂಧವಿರುವುದಿಲ್ಲ.

Prays time for cross examination granted.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆಎಂಎಫ್,ಸಿ,
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ